MYSORE LEGISLATIVE ASSEMBLY

Tuesday, 23rd March 1965.

The House met in the Assembly Chamber, Vidhana Soudha, Bangalore, at Twelve of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

MR. SPEAKER.—I am sorry I was late by five minutes and that time was taken up in co-ordinating some work relating to the business to be transacted here.

The Hon'ble Member Sri N. Nanjegowda brought to my notice that there is some error in translation regarding answer to question No. 292. What happened was, it was received in Kannada. It was translated into English and retranslated into Kannada. I find a slight difference. I am holding it over. Next question will be taken up.

STARRED QUESTIONS

(to which oral answers were given)

Amount granted to Harijan and Girijan Service Co-operative Societies in Bangalore South Taluk.

*Q.—506. SRI D. MUNICHINNAPPA (Bangalore South).—

Will the Government be pleased to state :—

(*a*) the amount granted by them to the two Harijan and Girijan Housing Service Co-operative Societies in Bangalore South Taluk ;

(*b*) the amount given by these Societies to the applicants so far, for construction of houses ;

(*c*) the reason for not giving money to any of the persons belonging to Bhovi community even though they do not possess houses and have contributed the share amount to the above Societies ;

(*d*) whether it is a fact that even persons having houses have taken money from the said Societies ;

(*e*) if so, the action taken by them in this behalf ?

A.—Sri KONDAJJI BASAPPA (Deputy Minister for Co-operation) —

(*a*) Rs. 1,64,200.

(*b*) Rs. 91,700.

(*c*) Since there is no application from the persons concerned.

(*d*) No such cases are reported.

(*e*) Does not arise in view of reply to clause (*d*) above.

ಶ್ರೀ ಡಿ. ಮುನಿಚಿನ್ನಪ್ಪ.—ಮನೆ ಇಲ್ಲದವರಿಗೆ ಸಾಲಕೊಡಬೇಕೆಂಬುದು ಸರ್ಕಾರದಪಾಲಿಸಿ ಇದೆ. ಇದರಲ್ಲಿ ನೂರಕ್ಕೆ 90 ಜನರಿಗೆ ಮನೆ ಇರುವವರಿಗೇ ಸಾಲಕೊಟ್ಟಿದ್ದಾರಲ್ಲಾ ಇದು ಸರ್ಕಾರದ ನೀತಿಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಮನೆ ಇದ್ದವರಿಗೇ ಕೊಟ್ಟಿದ್ದಾರೆ ಎಂಬುದು ಇದುವರೆಗೂ ಸರ್ಕಾರದವರ ಗಮನಕ್ಕೆ ಬಂದಿಲ್ಲ ಅಂಥಾದ್ದು ಇದ್ದರೆ, ನಮಗೆ ಬರಹದ ಮೂಲಕ ತಿಳಿಸಿದರೆ ಸರಿಯಾದ ಕ್ರಮ ಅವರ ಮೇಲೆ ತೆಗೆದುಕೊಳ್ಳುತ್ತೇವೆ.

ಶ್ರೀ ಡಿ. ಮುನಿಚಿನ್ನಪ್ಪ.—ಕೆಂಪೆಗೌಡ ಸ್ಕ್ಯಾಚ್ಯೂ ಕಟ್ಟಿದ್ದಾರಲ್ಲಾ ಅದೇ ಕಂಟ್ರಾಕ್ಟರಿಗೆ ಸಾಲ ಕೊಟ್ಟಿದ್ದಾರೆ. ಈ ರೀತಿ ಅಂತಹವರಿಗೆ ಸಾಲ ಕೊಡುವುದು ಸರ್ಕಾರದವರ ಪಾಲಿಸಿಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಮನೆ ಇದ್ದವರಿಗೆ ಕೊಡುವುದು ಸರ್ಕಾರದ ಪಾಲಿಸಿ ಅಲ್ಲ. ಸರ್ಕಾರದ ಪಾಲಿಸಿ ಪ್ರಕಾರ ಯಾರಿಗೆ ಮನೆ ಇಲ್ಲವೋ ಅಂಥವರಿಗೇ ಕೊಡಬೇಕು. ತಾವು ಹೇಳುವಂತೆ 82 ಜನರಲ್ಲಿ ಯಾರಾದರೂ ಅಂಥವರಿಗೆ ಮನೆ ಇದ್ದಂಥವರಿಗೆ ಸಾಲ ಕೊಟ್ಟಿದ್ದರೆ ಅದನ್ನು ನಮ್ಮ ಗಮನಕ್ಕೆ ತಂದರೆ ಆ ಸಾಲವನ್ನು ರೀ ಕನ್‌ವೇ ಮಾಡಿ ವಾಪಸು ತಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಡಿ. ಮುನಿಚಿನ್ನಪ್ಪ.—82 ಜನರಲ್ಲಿ ಸುಮಾರು 8-10 ಜನಕ್ಕೆ ಮನೆ ಇಲ್ಲದೇ ಇರಬಹುದು ಮಿಕ್ಕವರೆಲ್ಲರಿಗೂ ಮನೆ ಇವೆ, ಈ ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳಿಗೂ ಸಹ ಕಾಗದ ಬರೆದಿದ್ದೇನೆ.

ಅಧ್ಯಕ್ಷರು.—ಹೆಸರು ತಿಳಿಸಿ ಕಾಗದ ಬರೆಯಿರಿ, ತನಿಖೆ ಮಾಡುತ್ತಾರೆ.

ಶ್ರೀ ಡಿ. ಮುನಿಚಿನ್ನಪ್ಪ.—ಬರೆದಿದ್ದೇನೆ ಆದ್ದರಿಂದ ಆ ವಿಚಾರದಲ್ಲಿ ತನಿಖೆ ಮಾಡಿಸುತ್ತಿರಾ ?

ಶ್ರೀ ಕೊಂಡಜ್ಜಿ ಬಸಪ್ಪ.— ಖಂಡಿತವಾಗಿಯೂ ತನಿಖೆ ಮಾಡಿಸುತ್ತೇನೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಮನೆ ಕಟ್ಟುವುದಕ್ಕೆ ಸಾಲ ಕೊಡುವಾಗ ಅವರ ಮೇಲೆ ಕೆಲವು ನಿರ್ಬಂಧಗಳನ್ನು ಹಾಕಿ ಕೊಡುತ್ತಾರೆ ಅಲ್ಲವೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಹೌದು, ಅವರ ಹತ್ತಿರ ಸೈಟು ಇರಬೇಕು, ಸೈಟು ಇಲ್ಲದೇ ಇದ್ದರೆ ಅದನ್ನು ತಗೆದು ಕೊಳ್ಳುವುದಕ್ಕೆ ಬೇರೆ ರೂಪದಲ್ಲಿ ಸಾಲ ಕೊಡುತ್ತಾರೆ. 1500-3000 ರೂಪಾಯಿಗಳವರೆಗೂ ಸಾಲ ಕೊಡರಾಗುತ್ತದೆ ಅದನ್ನು ಅವರು 20 ವರ್ಷದಲ್ಲಿ ತೀರಿಸಬೇಕೆಂದು ಇದೆ. ಷೇರ್ ಬಂಡವಾಳವೂ ಕೂಡ 10 ರೂಪಾಯಿನ ಒಂದು ಷೇರು ಇದೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಗ್ರಾಮಾಂತರ ಪ್ರದೇಶಗಳಲ್ಲಿ ಅದರಲ್ಲೂ ಈ ತಾಲ್ಲೂಕಿಗೆ ಸಂಬಂಧಪಟ್ಟಹಾಗೆ ದುಡ್ಡು ತೆಗೆದುಕೊಂಡು ಹೋಗಿ ಅನೇಕ ಸಂದರ್ಭಗಳಲ್ಲಿ ದುರ್ಬಿನಿಯೋಗ ವಾಗುತ್ತಾ ಇದೆ. ಇದನ್ನು ತಪ್ಪಿಸುವುದಕ್ಕೆ ನೇರವಾಗಿ ದುಡ್ಡು ಕೊಡುವುದನ್ನು ನಿಲ್ಲಿಸಿ ಹೌಸ್ ಬಿಲ್ಡಿಂಗ್ ಸ್ಕೀಂ ಮಾಡಿ ಪ್ರೀ ಫ್ಯಾಬ್ರಿಕೇಟೆಡ್ ಮನೆಗಳನ್ನು ಒದಗಿಸುವುದು ಒಳ್ಳೆಯದಲ್ಲವೇ ? ಈ ರೀತಿ ದೇಶಾದ್ಯಂತ ಒಂದು ವ್ಯವಸ್ಥೆಯನ್ನು ಏಕೆ ಮಾಡಬಾರದು ?

ಶ್ರೀ ಕೊಂಡಜ್ಜಿ ಬಸಪ್ಪ.—ಸೊಸೈಟಿಗಳ ಮ್ಯಾನೇಜ್‌ಮೆಂಟ್‌ನವರು ಈ ಸಾಲವನ್ನು ಕೊಡುತ್ತಾ ಇದ್ದಾರೆ. ಇಂತಹ ಅನ್ಯಾಯಗಳನ್ನು ಮಾಡಿದರೆ ಅವರ ಗಮನಕ್ಕೆ ಬರುತ್ತದೆ. ಆದಳಿತ ಅವರ ಕೈಮುರ್ತೇ ಇರುತ್ತದೆ. ಏನಿದ್ದರೂ ಸೂಪರ್‌ವೈಸರಿ ಡ್ಯೂಟೀಸ್ ಮಾತ್ರ ಇರಾಖೆ ಯವರು ಮಾಡುತ್ತಾ ಇದ್ದಾರೆ. ಸಾಲ ಕೊಡುವವರು ಇರಾಖೆಯವರಲ್ಲ. ಆದ್ದರಿಂದ ಮ್ಯಾನೇಜ್‌ಮೆಂಟಿನವರು ಮನೆ ಇಲ್ಲದವರಿಗೆ ಸಾಲಕೊಡಬೇಕೆಂಬುದನ್ನು ತಿಳಿದುಕೊಳ್ಳಬೇಕು. ಅದರಂತೆ ಕೊಡಬೇಕು. ತಾವು ಹೇಳುತ್ತಾ ಇರುವಂತೆ ಮನೆ ಇರುವವರಿಗೂ ಸಾಲ ಕೊಟ್ಟಿದ್ದು ಹಣ ದುರ್ವ್ಯಯವಾಗುತ್ತಾ ಇದ್ದರೆ ಅದನ್ನು ಸರ್ಕಾರದವರ ಗಮನಕ್ಕೆ ತಂದರೆ ಸೂಕ್ತವಾದಂಥ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇನೆ.

Mr. SPEAKER.—Are pre-fabricated House scheaper ?

Sri H. R. KESHAVA MURTHY.—It is not a question of cheapness. But there will be a good use of the money that is given by the Government.

ಶ್ರೀ ಡಿ. ಮುನಿಚಿನ್ನಪ್ಪ.—ನಾನೇ ಒಂದು ಕಡೆ ನಿವೇಶನವನ್ನು ತೋರಿಸಿಕೊಟ್ಟೆ ಅಲ್ಲಿ 60-80 ಸೈಟ್‌ನ್ನು ಮಾಡಿ 4 ಸಂಸಾರಕ್ಕೆ ಏಂಗಡಿಸಿದ್ದಾರೆ ಈ ರೀತಿ ಹಣವನ್ನು ತೆಗೆದುಕೊಂಡು ಸರ್ಕಾರದ ದುಡ್ಡು ಹಾಳಾಗುತ್ತಾ ಇರುವುದನ್ನು ಬಯಪಟ್ಟು ತನಿಖೆ ಮಾಡುತ್ತೀರಾ ?

ಶ್ರೀ ಕೊಂಡಜ್ಜಿ ಬಸಪ್ಪ.—ಈ ವಿಚಾರ ತಿಳಿಸಿದ್ದೀರಿ. ಬರಹದ ಮೂಲಕ ತಿಳಿಸಿದರೆ ಖಂಡಿತ ವಾಗಿಯೂ ತನಿಖೆ ಮಾಡಿಸಿ ಸೂಕ್ತ ಕಂಡ ಕಾರ್ಯಕ್ರಮ ತೆಗೆದು ಕೊಳ್ಳುತ್ತೇವೆ.

ಶ್ರೀ ಡಿ. ಮುನಿಚಿನ್ನಪ್ಪ.—ಬೆಂಗಳೂರು ನೌತ್ ತಾಲ್ಲೂಕಿನಲ್ಲಿ ಎರಡು ಸೊಸೈಟಿಗಳು ಇವೆ ಈ ಎರಡರಲ್ಲಿ ಒಬ್ಬ ಬೊಪಿ ಜನಾಂಗದವನಿಗೂ ಸಾಲ ಕೊಟ್ಟಿಲ್ಲ. ನಾನೂ ಕೂಡ ಅಲ್ಲಿ ಒಬ್ಬ ಷೇರ್ ಹೊರ್ಡರ್ ಅಲ್ಲಿಗೆ 60—70 ಜನ ಷೇರು ಹೋಲ್ಡರುಗಳನ್ನು ಕರೆಕ್ಟ್ ಮಾಡಿಕೊಟ್ಟಿದ್ದೇನೆ. ಇದಕ್ಕೆ ಗಮನಕೊಟ್ಟು ಇನ್ನು ಮುಂದಾದರೂ ಜನರಿಗೆ ಸಹಾಯ ಮಾಡಿಕೊಡುತ್ತೀರಾ ?

ಶ್ರೀ ಕೊಂಡಜ್ಜಿ ಬಸಪ್ಪ.—ಒಂದು ಸೊಸೈಟಿಯಲ್ಲಿ 82 ಜನ, ಇನ್ನೊಂದರಲ್ಲಿ 10 ಜನಕ್ಕೆ ಕೊಟ್ಟಿದ್ದಾರೆ, ತಾವು ಹೇಳುವ ಅರ್ಥ ತಮ್ಮ ಜನಾಂಗದವರೊಬ್ಬರಿಗೂ ಕೊಟ್ಟಿಲ್ಲ ಎಂದು ಆ ರೀತಿ ಏನಾದರೂ ಬೋಪಿ ಅಥವಾ ಲಂಬಾಣಿ ಜನಾಂಗದವರಿಗೆ ಕೊಡದಿದ್ದರೆ, ಅವರು ನದನ್ಯರಾಗಿದ್ದೂ, ಅವರ ಅರ್ಜಿ ಬಂದಿದ್ದರೆ ಅವರಿಗೆ ಮಂಜೂರು ಮಾಡಿ ಎಂದು ಸೂಚನೆ ಕೊಡುತ್ತೇವೆ.

ಶ್ರೀ ಎನ್. ನಂಜೇಗೌಡ.—ಅನೇಕ ಸೊಸೈಟಿಗಳಿಂದ ಹಣಕ್ಕಾಗಿ ಅರ್ಜಿ ಬಂದಿದ್ದರೂ ಕೂಡ ಅವು ರಿಜಿಸ್ಟರಾಗಿದ್ದರೂ ಅವಕ್ಕೆ ಕೊಡದಿರುವುದಕ್ಕೆ ಕಾರಣವೇನು ?

ಶ್ರೀ ಕೊಂಡಜ್ಜಿ ಬಸಪ್ಪ.—ಈ ಎರಡು ಸೊಸೈಟಿಗಳಿಗೆ ಒಂದಕ್ಕೆ 19 ಸಾವಿರ ಚಿಲ್ಲರೆ, ಇನ್ನೊಂದಕ್ಕೆ ಒಂದು ಲಕ್ಷ ಚಿಲ್ಲರೆ ರೂಪಾಯಿಗಳನ್ನು ಕೊಟ್ಟಿದೆ. ಒಂದು ಸೊಸೈಟಿ ಹಣ ಡ್ರಾ ಮಾಡಿಲ್ಲ, ಇನ್ನೊಂದು 19 ಸಾವಿರ ಚಿಲ್ಲರೆ ಹಣವನ್ನು ಪೂರ್ಣವಾಗಿ ಡ್ರಾ ಮಾಡಿದೆ. ಈಗಿರುವ ಅಲಾಟ್‌ಮೆಂಟ್ ಕಡಮೆ. ಈ ವರ್ಷ 6 ಲಕ್ಷ ರೂಪಾಯಿ ಮಾತ್ರ ಅಲಾಟ್‌ಮೆಂಟ್ ಇತ್ತು. ಎರ್. ಐ. ಸಿ. ಯಿಂದ ಬರಬೇಕಾದ ಹಣಕ್ಕೆ ನಾವು ಗ್ಯಾರಂಟಿ ಕೊಟ್ಟು ವ್ಯವಹಾರ ನಡೆಸಲಾಗುತ್ತದೆ ಒಂದು ಕೋಟಿ ರೂಪಾಯಿ ಕೇಳಿದೆ. ಅದಕ್ಕೆ ಇಂಡಿಯಾ ಸರಕಾರದ ಅನುಮತಿ ಬೇಕು. ಆ ಹಣ ಬಂದ ತಕ್ಷಣ ಎಲ್ಲರಿಗೂ ಸಹಾಯಮಾಡಲು ಅನುಕೂಲವಾಗಬಹುದು.

ಶ್ರೀ ಎನ್. ನಂಜೇಗೌಡ.—ಬಂದಿರುವ ಹಣವನ್ನು ಎಲ್ಲ ಸೊಸೈಟಿಗಳಿಗೂ ನಮವಾಗಿ ಹಂಚುವುದು ನ್ಯಾಯವಲ್ಲವೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಹಾಗೆ ಮಾಡುವುದು ಕಷ್ಟ. ಬಂದ ಹಣವನ್ನು ಅವಶ್ಯಕತೆ ನೋಡಿ ಹಂಚಬೇಕಾಗುತ್ತದೆ. ಕೆಲವರು ಮೊದಲು ಕೇಳಿದವರಿಗೆ ಮೊದಲು ಕೊಡಬೇಕೆಂದು ಹೇಳುತ್ತಾರೆ, ತಾವು ಹೇಳುವುದೇ ಒಂದು ರೀತಿ. ಎಲ್ಲ ವಿಚಾರಗಳನ್ನೂ ಗಮನಿಸಿ ಸಾಧ್ಯವಾದಷ್ಟು ಮಟ್ಟಿಗೆ ಎಲ್ಲರಿಗೂ ಸರಿಯಾಗಿ ಹಂಚಲು ಪ್ರಯತ್ನಮಾಡುತ್ತೇವೆ.

ಶ್ರೀ ಎಂ. ಎಸ್. ಕೃಷ್ಣಸಿಂಗ್.—ತಾವು ಹೇಳಿದ ಹಾಗೆ ಮಾಡಿದರೆ ಬಾಯಿದ್ದವನು ಬರದಲ್ಲ ಬದುಕಿದ ಎಂದಾಗುವುದಿಲ್ಲವೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಅದು ತಾಮ್ಮ ಅಭಿಪ್ರಾಯ. ಕೆಲವು ಕಡೆ ರಿಕಾರ್ಡು ಅಸಿಸ್ಟೆಂಟ್ ರಿಜಿಸ್ಟ್ರಾರರಿಂದ ರಿಜಿಸ್ಟ್ರಾರರಿಗೆ ಬರುತ್ತದೆ, ಕೆಲವು ವೇಳೆ ಬಾರದೆ ಇರುವ ಸಂದರ್ಭವೂ ಇರುತ್ತದೆ, ಸರಕಾರದಲ್ಲಿ ಅಥವಾ ರಿಜಿಸ್ಟ್ರಾರರಲ್ಲಿ ಪೆಂಡಿಂಗ್ ಇದೆ ಎಂದು ಹೇಳುತ್ತಾರೆ. ರಿಜಿಸ್ಟ್ರಾರರಿಂದ ಶಿಫಾರ್ಸಾಗಿ ಬಂದರೆ ಹಣವಿದ್ದರೆ ಕೊಡುತ್ತೇವೆ.

Sri SANJEEVANATH AIKALA.—Is it not a fact that loans were given to those applicants who are only congressmen ?

Sri KONDAJJI BASAPPA.—It is not correct.

ಶ್ರೀ ಡಿ. ಮುನಿಚಿನ್ನಪ್ಪ.—ಈಗ ಹಳೆಯಮನೆಯನ್ನು ಕೊಟ್ಟ ಹಣದಲ್ಲಿ ರಿಪೇರಿಮಾಡುತ್ತಿದಾರೆ, ಹೊಸ ಮನೆ ಕಟ್ಟುತ್ತಿಲ್ಲ. ಇದನ್ನು ನೋಡಿ ಸೂಕ್ತ ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಕೊಂಡಜ್ಜಿ ಬಸಪ್ಪ.—ಯಾವುದೋ ಒಂದು ಸೊಸೈಟಿಯಲ್ಲಿ ಹಾಗಾಗಿರಬಹುದು. ಅದನ್ನು ಖಚಿತವಾಗಿ ಬರೆದುಕಳಿಸಿದರೆ ಸೂಕ್ತ ಕ್ರಮ ಕೈಕೊಳ್ಳುತ್ತೇವೆ.

ಶ್ರೀ ಎನ್. ನಂಜೇಗೌಡ.—ಈಗ ಉಳಿದಿರುವ ಸುಮಾರು 60 ಸಾವಿರ ರೂಪಾಯಿಗಳನ್ನು ವಿತ್‌ಡ್ರಾಮಾಡಿ ತಮ್ಮ ಟೇಬಲ್ ಮೇಲಿರುವ ರಿಕಾರ್ಡಿನಲ್ಲಿ ನಮೂದಾಗಿರುವ ಸೊಸೈಟಿಗಳಿಗೆ ಹಂಚುತ್ತೀರಾ ?

ಶ್ರೀ ಕೊಂಡಜ್ಜಿ ಬಸಪ್ಪ.—ಹಾಗೆ ಮಾಡುವುದಕ್ಕಾಗುವುದಿಲ್ಲ. ಕೆಲಸ ಪ್ರಾರಂಭವಾದಾಗ ಅರ್ದ ಹಣ ಕೊಡುತ್ತೇವೆ, ರೂಫಿಂಗ್ ಲೆವಲ್ಲಿಗೆ ಬಂದಾಗ ಉಳಿದ ಅರ್ಧವನ್ನು ಕೊಡುತ್ತೇವೆ. ಆದುದರಿಂದ ಮಾನ್ಯ ಸದಸ್ಯರು ಹೇಳಿದ ಹಾಗೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಈಗ ಕೊಡುತ್ತಿರುವ ಹಣ ನಿಮ್ಮವರ್ಗದವರಿಗೆ ಸಾಲ ದಿರುವುದರಿಂದ ಎಲ್. ಐ. ಸಿ. ನಿಂದ ತರಿಸಿಕೊಡಬೇಕು. ಹಾಗೆ ತರಿಸಲು ಮಾಡಿರುವ ಪ್ರಯತ್ನ ಯಾವ ಹಂತದಲ್ಲಿ ಇದೆ.

ಶ್ರೀ ಕೊಂಡಜ್ಜಿ ಬಸಪ್ಪ.—ಬಡ್ಡಿ ದರ ಕಡಮೆ ಮಾಡುವ ವಿಚಾರ ವ್ಯವಹಾರದಲ್ಲಿದೆ, ಎಲ್. ಐ. ಸಿ. ನವರು ಕಡಮೆಮಾಡಲು ಸಾಧ್ಯವಿಲ್ಲವೆಂದು ಹೇಳುತ್ತಿದ್ದಾರೆ. ಅದಾದಮೇಲೆ ಇಂಡಿಯಾ ಸರಕಾರದ ಅನುಮತಿ ಪಡೆಯಬೇಕು. ಈ ವಿಚಾರದಲ್ಲಿ ರಿಸರ್ವ್ ಬ್ಯಾಂಕಿನೊಂದಿಗೆ ಹಣಕಾಸಿನ ಇಲಾಖೆ ವ್ಯವಹಾರ ನಡೆಸುತ್ತಿದೆ.

ಶ್ರೀ ಡಿ. ಮುನಿಚಿನ್ನಪ್ಪ.—ಒಂದು ಸೊಸೈಟಿಯ ಪ್ರೆಸಿಡೆಂಟರು ಹಿಂದಿನ ಗೃಹಖಾತೆಯ ಉಪಮಂತ್ರಿಗಳೆಂಬುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಬಂದಿದೆ.

ಶ್ರೀ ಡಿ. ಮುನಿಚಿನ್ನಪ್ಪ.—ಅದೇ ಸೊಸೈಟಿಯಲ್ಲಿ ನಾನು ಹೇಳಿದಂತೆ ಅವ್ಯವಸ್ಥೆಯಾಗಿರುವುದು. ಮೈನಾರಿಟಿ ಕಮ್ಯೂನಿಟಿಗಳಾದ ಲಂಬಾಣಿ, ಬೋವಿ ಮತ್ತು ಕೊರಚರಿಗೆ ಒಂದು ಸೊಸೈಟಿ ಮಂಜೂರುಮಾಡುತ್ತೀರಾ ?

ಶ್ರೀ ಕೊಂಡಜ್ಜಿ ಬಸಪ್ಪ.—ಹಾಗೆ ಪ್ರತ್ಯೇಕ ಸೊಸೈಟಿ ಮಾಡುವುದಕ್ಕಾಗುವುದಿಲ್ಲ. ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಒಂದು ಸೊಸೈಟಿ ಇರಬೇಕೆಂಬುದು ನಮ್ಮ ತತ್ವ. ಅದರ ಸದಸ್ಯರಾಗಿ ಅರ್ಜಿ ಹಾಕಿದರೆ ಸಾಲ ಸಿಕ್ಕುವಹಾಗೆ ವ್ಯವಸ್ಥೆಮಾಡೋಣ.

ಶ್ರೀ ಎಂ. ಎನ್. ಕೃಷ್ಣಸಿಂಗ್.—ಒಂದೇ ಜನಾಂಗ ಕೆಲವು ಕಡೆ ಇದ್ದರೆ ಏನು ಮಾಡುತ್ತೀರಿ ?

ಶ್ರೀ ಕೊಂಡಜ್ಜಿ ಬಸಪ್ಪ.—ಈಗ ತಾಲ್ಲೂಕು ವಾರ್ಷದಲ್ಲಿ ಸೊಸೈಟಿ ಮಾಡುವುದು. ಒಂದು ತಾಲ್ಲೂಕಿನಲ್ಲಿ ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಒಂದು ಸೊಸೈಟಿ ಇರಬೇಕೆಂದಿದೆ. ಒಂದುವೇಳೆ ತಾವು ಹೇಳುವಂತಿರುವ ಕಡೆ ಒಂದು ಕಾಲೋನಿ ಪ್ರತ್ಯೇಕವಾಗಿದ್ದರೆ ತಮ್ಮ ಸಲಹೆ ವಿಚಾರಮಾಡಬಹುದು.

ಶ್ರೀ ಸಿದ್ದಯ್ಯ ಕಾಶೀಮಠ್.—ಬಡ್ಡಿ ದರ ಜಾಸ್ತಿ ಇರುವುದನ್ನು ಕಡಮೆಮಾಡಲು ಸಾಧ್ಯವೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಈಗ ಶೇಕಡ 2 ರೂಪಾಯಿ ಧಾರ್ಜುಮಾಡುವುದು. ಶೇಕಡ 5 ಇರುವುದರಲ್ಲಿ 3ರನ್ನು ಸೋಷಿಯಲ್ ವೆಲ್‌ಫೇರ್ ಇಲಾಖೆ ಕೊಡುವುದು. ಶೇಕಡ 2 ಕೂಡ ಜಾಸ್ತಿ ಎಂದರೆ ಪರಿಶೀಲಿಸೋಣ.

ಶ್ರೀ ಡಿ. ಮುನಿಚಿನ್ನಪ್ಪ.—ಸರ್ಮಾರು 6 ತಿಂಗಳ ಹಿಂದೆ ಸೊಸೈಟಿಯಿಂದ ತಗೆದುಕೊಂಡು ಹಣದಲ್ಲಿ ಸುಮಾರು 2 ಸಾವಿರ ರೂಪಾಯಿಗಳನ್ನು ಒಂದು ಉತ್ಸವಕ್ಕಾಗಿ ಖರ್ಚುಮಾಡಿರಂಬುದು ಗಮನಕ್ಕೆ ಬಂದಿದೆಯೇ ?

(ಉತ್ತರವಿಲ್ಲ)

Mr. SPEAKER.—Members are complaining that answers are not ready. But they remain absent to put them. When answers are ready

Sri SANJEEVANATH AIKALA.—If the questions coming up on the next day are sent to the members the previous day, it will be easy for the members to be aware of their questions. It was the custom previously.

Mr. SPEAKER.—Is it a good position to take that the members will be present if the answers are ready ? We are assembled only for this purpose.

Sri SANJEEVANATH AIKALA.—Formerly, it was the custom. I suggest that it should be done hereafter.

Mr. SPEAKER.—I will take note of it. Next question.